Sri D. B. PAWAR.—There is no such complaints received so far from Chitradurga District is concerned.

ಶ್ರೀ ಬಿ. ದೊಡ್ಡಬೋರೇಗೌಡ.—ನಮ್ಮ ಜಿಲ್ಲೆಯಿಂದ 3-4 ವರ್ಷಗಳ ಹಿಂದೆ ಅರ್ಜಿ ಕೊಟ್ಟಿದೆ. ಇದುವರೆಗೂ ಕೊಟ್ಟಿಲ್ಲ. ನಾನು ಅರ್ಜಿಕೊಟ್ಟು ಮೂರು ವರ್ಷ ಆಗಿದೆ ಇದುವರೆಗೂ ಕಳುಹಿಸದೇ ಇರಲು ಕಾರಣ ಏನು? ಬುಲ್‌ಡೋಜರ್ಸ್ ಕಳುಹಿಸಲು ಯಾರಿಂದಲಾದರೂ ಶಿಫಾರಸ್ಸು ಮಾಡಬೇಕೇ?

Sri D.B. PAWAR.—It depends upon the availability of the machines and farmers are expected to write to the Director of Agriculture for the machines.

ಶ್ರೀ ಇ. ಪುಂಡಲೀಕಪ್ಪ.—ಬಾವಿ ಕೊರೆಯುವ ಯಂತ್ರಗಳು ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿವೆ? ನೀರಾವರಿ ಇಲ್ಲದಂತಹ ಪ್ರದೇಶಗಳಿಗೆ ಕಳುಹಿಸಿ ಹೆಚ್ಚು ಆಹಾರ ಬೆಳೆಯುವುದಕ್ಕೆ ಪ್ರಯತ್ನ ಮಾಡುತ್ತಿರಾ?

Sri D. B. PAWAR.—We have in Bangalore 16 boring machines—in Kolar 15, in Dharwar 2, Tumkur 3, Chitradurga 4, Mysore 2, Hassan 2, South Kanara 1, Belgaum 5—Total 52 boring machines.

ಶ್ರೀ ಎಂ. ಎನ್. ರಾಮಣ್ಣ.—ನಮ್ಮಲ್ಲಿ ಬೋರ್‌ವೆಲ್ಸ್ ಒಂದು ವರ್ಷದಿಂದ ಒಂದು ಬಾವಿ ಯೊಳಗೆ ಇದ್ದು ಅದನ್ನು ತೆಗೆದು ರಿಪೇರಿ ಮಾಡದೆ ಇರುವುದರಿಂದ ಸಾರ್ವಜನಿಕವಾಗಿ ಅನಾನುಕೂಲ ವಾಗಿದೆ. ಸರ್ಕಾರಕ್ಕೂ ಕೂಡ ನಷ್ಟವಾಗಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ?

Sri D. B. PAWAR.—I do not think this is brought to the notice of the Government.

Mr. SPEAKER.—Question hour is over. Now, Short Notice Question No. 49.

SHORT NOTICE QUESTION AND ANSWERS

Closure of certain High Schools is Raichur District

49. Sri M. NAGAPPA (Raichur).—

Will the Minister for Education be pleased to state.—

(*a*) Whether the Government has issued orders to District Education Officer, Raichur to stop the functioning of the following High Schools in Raichur District from 10th April 1969 :

(i) Vijayanagar High School, Munirabad
(ii) Basaveshwar High School at Balganur
(iii) Jawalgere T.D.B. High School, Lingsugur
(iv) Gurgunta T.D.B. High School, Lingsugur
(v) Mudgal T.D.B. High School, Lingsugur
(vi) Batgeri T.D.B. High School, Taluk Koppal
(vii) Talkal T.D.B. High School, Taluk Yelburga ;

(*b*) if so, the reasons for issuing such orders ?

Sri N. M. KOTRABASAIAH SOGI (Deputy Minister for Education).—

(*a*) and (*b*) No. The Director of Public Instruction as per Rule 16 (xi) of the amended grant-in-aid Code has issued notices to these schools as the strength was very low. The notices were issued to close such standards from 10th April 1969 as no aid can be paid by the Department to such standards whose strength itself is less than the daily average attendance of 25 in each standard in the case of Kannada Medium High Schools and 15 in respect of High Schools meant for linguistic minorities. The D.P.I. has been asked to review all the cases and relax the rule in deserving cases.

ಶ್ರೀ ಎಂ. ನಾಗಪ್ಪ.—ಸ್ವಾಮಿ, 10ನೇ, ಏಪ್ರಿಲ್ 1969 ರಿಂದ ರಾಯಚೂರು ಜಿಲ್ಲೆಯಲ್ಲಿನ ಸುಮಾರು 6-7 ಪ್ರೌಢಶಾಲೆಗಳನ್ನು ಬಂದ್ ಮಾಡಬೇಕೆಂದು ಸರ್ಕಾರದವರು ಆದೇಶ ಕೊಟ್ಟಿದ್ದಾರೆ. ಅದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆಂದು ಇಲ್ಲಿ ಉತ್ತರ ಕೊಟ್ಟಿದ್ದೀರಿ, ರಾಯಚೂರು ಜಿಲ್ಲೆಯಲ್ಲಿ ವಿದ್ಯಾಪ್ರಗತಿ ಕೆಳಗಿಳಿದಿದೆ. ವಿದ್ಯಾವಂತರ ಸಂಖ್ಯೆ ಇಡೀ ರಾಜ್ಯಮಟ್ಟದಲ್ಲಿ ಬಹಳ ಕಡಿಮೆ ಇದೆ. ಆದ್ದರಿಂದ ಈ ಜಿಲ್ಲೆಗೆ ಸ್ಪೆಷರ್ ಕನ್‌ಸಿಡರೇಷನ್ ತೋರಿಸಿ ಈ ಶಾಲೆಗಳಲ್ಲಿ ಪ್ರತಿವರ್ಗದಲ್ಲಿ ಪ್ರತಿದಿನದ ಸರಾಸರಿ ಹಾಜರಾತಿಯು 15 ರಷ್ಟು ಇದ್ದರೂ ಮುಂದೆ ಈ ತಾಲ್ಲೂಕುಗಳನ್ನು ಮುಂದುವರಿಸಿ ಅವು ನಡೆಯುವಂತೆ ಅನುಕೂಲ ಮಾಡಿಕೊಡುತ್ತೀರಾ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದು ರಾಯಚೂರು ಜಿಲ್ಲೆಗೆ ಮಾತ್ರವಲ್ಲ. ಇಡೀ ರಾಜಾದ್ಯಂತ ಪ್ರತಿಯೊಂದು ಪ್ರೌಢಶಾಲೆಯಲ್ಲಿಯೂ ಪ್ರತಿವರ್ಗದಲ್ಲಿ ಕೊನೆಯ ಪಕ್ಷ 25 ಮಕ್ಕಳು ಇರಬೇಕು ಎಂದು ಸರ್ಕಾರದವರು ಒಂದು ನಿಯಮ ಮಾಡಿದ್ದಾರೆ. ಆದ್ದರಿಂದ ಆ ಪ್ರೌಢಶಾಲೆಗಳಲ್ಲಿ 25 ಮಕ್ಕಳಿಗಿಂತ ಕಡಿಮೆ ಇದ್ದಪಕ್ಷದಲ್ಲಿ ಮತ್ತು ಭಾಷಾ ಅಲ್ಪಸಂಖ್ಯಾತರಿಗಾಗಿ ಇರುವ ಪ್ರೌಢಶಾಲೆಗಳಲ್ಲಿ 15 ಕ್ಕಿಂತ ಕಡಿಮೆ ಇರುವಂತಹ ವರ್ಗಗಳಿಗೆ ಗ್ರಾಂಟ್ ಇನ್ ಏಯ್ಡ್ ಕೊಡುವುದಕ್ಕಾಗದ ಕಾರಣ ಅಂಥಾ ವರ್ಗಗಳನ್ನು 10ನೇ ಏಪ್ರಿಲ್ 1969 ರಿಂದ ಮುಚ್ಚಬೇಕೆಂದು ನೋಟಿಫಿಕೇಷನ್ ಅನ್ನು ನೀಡಲಾಗಿದೆ. ಅಷ್ಟೇ ಹೊರತು, ಆ ಪ್ರೌಢಶಾಲೆಗಳನ್ನು ಮುಚ್ಚಬೇಕೆಂದು ಉದ್ದೇಶ ಸರ್ಕಾರಕ್ಕೆ ಇಲ್ಲ.

ಶ್ರೀ ಎಂ. ನಾಗಪ್ಪ.—ಗ್ರಾಂಟ್ ಇನ್ ಏಯ್ಡ್ ಕೋಡಿನಲ್ಲಿ ಸ್ಪೆಷರ್ ಕನ್‌ಸಿಡರೇಷನ್ ಮಾಡಿ ರಾಯಚೂರು ಜಿಲ್ಲೆಯಲ್ಲಿರತಕ್ಕ ಹೈಸ್ಕೂಲುಗಳಲ್ಲಿ ಪ್ರತಿಯೊಂದು ತರಗತಿಯಲ್ಲಿಯೂ 25 ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಇದ್ದರೂ, ಎಂದರೆ 15 ಹುಡುಗರು ಇದ್ದರೂ ಆ ಶಾಲೆಗಳನ್ನು ನಡೆಸಿ ಅವುಗಳಿಗೆ ಗ್ರಾಂಟ್ ಇನ್ ಏಯ್ಡ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಎಮ್. ಕೊಟ್ರಬಸಯ್ಯ ಸೋಗಿ.—ನಾನು ಆಗಲೇ ಸ್ಪಷ್ಟವಾಗಿ ಹೇಳಿದೆ. ಯಾವ ಶಾಲೆಯು ಮುಚ್ಚಬೇಕು ಎನ್ನುವುದು ಸರಕಾರದ ಉದ್ದೇಶವಿಲ್ಲ. ಆದರೆ ವಾಸ್ತವವಾಗಿ ಗ್ರಾಂಟು ಕೊಡಬೇಕೇ ಬೇಡವೇ ಎನ್ನುವುದನ್ನು ರೂಲ್ಸ್ ಪ್ರಕಾರ ನಿಗದಿ ಮಾಡಬೇಕಾಗುತ್ತದೆ. ಶಾಲೆಗಳನ್ನು ಮುಚ್ಚಬೇಕು ಎನ್ನುವುದು ಸರಕಾರದ ಉದ್ದೇಶ ಖಂಡಿತ ಇಲ್ಲ. ಮಾನ್ಯ ಸದಸ್ಯರು ಇಲ್ಲಿ ಹೇಳಿರುವ ವಿಚಾರಗಳನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಿ ವಿಚಾರ ಮಾಡುತ್ತೇವೆ.

ಶ್ರೀ ಎಂ. ನಾಗಪ್ಪ.—ಉತ್ತರದಲ್ಲಿ ಕೊನೆಯದಾಗಿ ಆಯಾ ಕೇಸುಗಳನ್ನು ಡಿ.ಪಿ.ಐ. ರವರು ನೋಡಿಕೊಂಡು ಆಯಾ ಶಾಲೆಗಳನ್ನು ಕಂಟಿನ್ಯೂ ಮಾಡಲು, ಇಲ್ಲವೇ ಮುಚ್ಚಲು ಆರ್ಡರು ಮಾಡುವ ಅಧಿಕಾರವನ್ನು ಕೊಟ್ಟಿದ್ದೀರಿ. ಈ ತರಹ ಅಧಿಕಾರವನ್ನು ಕೊಟ್ಟರೆ ಅವರು ಕೆಲವನ್ನು ಮುಚ್ಚಿ ಮತ್ತು ಕೆಲವನ್ನು ಕಂಟಿನ್ಯೂ ಮಾಡಿದರೆ, ಅದು ಸರಿಯಾಗುವುದಿಲ್ಲ. ಈ ವರ್ಷವಾದರೂ ಕನಿಷ್ಠ ಪಕ್ಷ ಸರಕಾರ ಇಲ್ಲಿರುವ ಶಾಲೆಗಳನ್ನೆಲ್ಲಾ ನಡೆಸಬೇಕು ಎಂದು ಒಂದು ನಿರ್ದಿಷ್ಟವಾದ ಆದೇಶವನ್ನು ಕೊಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಾನಾಗಲೇ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ಎಲ್ಲ ಶಾಲೆಗಳನ್ನೂ ಮುಚ್ಚುವುದಿಲ್ಲ ಮತ್ತು ಈಗಿರುವಂತೆ ನಡಸಿಕೊಂಡು ಹೋಗುತ್ತಾರೆ. ಆದರೆ ಇದರಲ್ಲಿ ಗ್ರಾಂಟ್ ರೂಲ್ಸ್ ಪ್ರಕಾರ ಮಾತ್ರ ಪರಿಶೀಲನೆ ಮಾಡಬೇಕಾಗಿದೆ.

Mr. SPEAKER.—Short Notice Question is over.